ದಿನಾಂಕ 23-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲು - ಶ್ರೀ. ಆರ್.ಕೆ ವಕೀಲರಿಂದ ವಾದಿ ಪರ

ಚಂದ್ರಶೇಖರ್ ನನ್ನ ಸಂಬಂಧಿ ಹಾಗೂ ಸ್ನೇಹಿತರು. ಮೃತ ಗಜಾನನಯ್ಯ ರವರು ವಿಲ್ ಮಾಡಿರುವ ಬಗ್ಗೆ ನನಗೆ ಗೊತ್ತಿರುತ್ತದೆ. ಮೃತ ಗಜಾನನಯ್ಯ ಹಾಗೂ ನಾನು ಸಂಬಂಧಿಕರು. ಮೃತ ಗಜಾನನಯ್ಯ ವಿಲ್ ಮಾಡುವ ವಿಚಾರವನ್ನು ನನ್ನ ಬಳಿ ಚರ್ಚಿಸಿರುತ್ತಾರೆ. ವಿಲ್ ಮಾಡಿರುವುದನ್ನು ನನಗೆ ತೋರಿಸಿರುತ್ತಾರೆ. ನನಗೆ ಮೃತ ಗಜಾನನಯ್ಯ ರವರು ಮಾಡಿರುವ ವಿಲ್ ಯಾವುದು ಎಂದು ಹೇಳಲು ಅಗುವುದಿಲ್ಲ. ನಿಪಿ-1 ರಲ್ಲಿ ಇರುವ ನಿಪಿ-1 ಎ ಸಹಿ ಮೃತ ಗಜಾನನಯ್ಯ ರವರದ್ದು.

ಶಾದರಮ್ಮ ನವರು ವಿಲ್ ನ್ನು ರದ್ದತಿ ಮಾಡಿರುವ ವಿಷಯ ನನಗೆ ಗೊತ್ತಿರುವುದಿಲ್ಲ. ದಾನ ಪತ್ರವನ್ನು ದಿನಾಂಕ 6-9-2011 ರಂದು ಮಾಡಿರುತ್ತಾರೆ. ಸದರಿದಾಖಲಾತಿಯನ್ನು ಮಧ್ಯಾಹ್ನ 3 ರಿಂದ 4 ಗಂಟೆ ಸಮಯದಲ್ಲಿ ಮಾಡಲಾಗಿತ್ತು. ವಾದಿ, ಮೃತ ಗಜಾನನಯ್ಯ ಮತ್ತು ಶಾರದಮ್ಮ ರವರ ಜೊತೆಗೆ ವಾಸವಾಗಿದ್ದರು ಎಂದರೆ ಸಾಕ್ಷಿಯು ಬಹಳ ದಿನಗಳ ಹಿಂದೆ ವಾಸವಾಗಿದ್ದರು ಎಂದು ಹೇಳುತ್ತಾರೆ.

ಗಜಾನನಯ್ಯ ರವರು ಆಸ್ತಿಯನ್ನು ಖರೀದಿಸಿದ್ದರು ಖರೀದಿ ಮಾಡಿದ ದಿನಂಕ ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತು ಗಜಾನನಯ್ಯ ಖರೀದಿಸಿದ ಸ್ವತ್ತು ಅಲ್ಲ ಎಂದರೆ ಸುಳ್ಳು. ದಾವಾ ಸ್ವತ್ತು ಗಜಾನನಯ್ಯ ರವರು ಮೃತರಾಗುವ ಸಮಯದ ತನಕವೂ ಅವರ ಬಳಿಯೇ ಸ್ವಾಧೀನದಲ್ಲಿ ಇತ್ತು ಎಂದರೆ ಸರಿ. ಗಜಾನನಯ್ಯರವರಿಗೆ ಯಾವುದೇ ಮಕ್ಕಳು ಇರಲಿಲ್ಲ. ಗಜಾನನಯ್ಯ ರವರು ಬರೆಪಿದ ವಿಲ್ ನಲ್ಲಿ ಶಾರದಮ್ಮನವರಿಗೆ ದಾವಾ ಸ್ವತ್ತನ್ನು ಪರಭಾರೆ ಮಾಡುವ ಹಕ್ಕು ಇಲ್ಲ ಎಂದು ಬರೆದಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ.

ದಾನ ಪತ್ರ ಮಾಡಲು ಶಾರದಮ್ಮರವರಿಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಗೊತ್ತಿಲ್ಲ. ದಾನಪತ್ರವನ್ನು ಮಾಡಲು ಶಾರದಮ್ಮವರಿಗೆ ಒತ್ತಡ ಹೇರಲಾಗಿತ್ತು ಎಂದರೆ ಸುಳ್ಳು. ದಾನ ಪತ್ರ ಮಾಡುವ ಸಮಯದಲ್ಲಿ ಶಾರದಮ್ಮ ವರ ಆರೋಗ್ಯ ಸ್ಥಿತಿ ಚೆನ್ನಾಗಿ ಇರಲಿಲ್ಲ ಎಂದರೆ ಸುಳ್ಳು. ಪ್ರತಿವಾದಿಗೆ ಅನುಕೂಲವಾಗಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸುಳ್ಳು.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂಡಾಧಿಕಾರಿಗಳು, ಸಾಗರ